# 'ದರಿದ್ರದೇವೋ ಭವ'

## ಬಡತನ ನಿರ್ಮೂಲನೆಯನ್ನು ಕುರಿತು ಸ್ವಾಮಿ ವಿವೇಕಾನಂದರ ವಿಚಾರಗಳು

ವಿಜಯಕುಮಾರ



**ಭಾರತದ ಬಡಜನರ ಸ್ಥಿತಿಯನ್ನು ಕಂಡು ಸ್ವಾಮಿ ವಿವೇಕಾನಂದರ ಹೃದಯ ಮಮ್ಮಲ ಮರುಗುತ್ತಿತ್ತು. ಅಪಾರ ಹೃದಯಸಂಪನ್ನರಾದ ಅವರು, ತಮ್ಮ ಅದಮ್ಯ ಬೌದ್ಧಿಕ ಚಿಂತನೆಯ ಬಲದಿಂದ, ಈ ಘೋರಸಮಸ್ಯೆಯ ಪರಿಹಾರಕ್ಕೆ, ಪ್ರಾಯೋಗಿಕವಾದ ಕಾರ್ಯಸೂಚಿಯನ್ನು ನೀಡಿದ್ದಾರೆ. ಇದರ ವಿಸ್ತೃತ ಮತ್ತು ಚೇತೋಹಾರಿ ಪರಿಚಯವನ್ನು ನಮಗೆ ಮಾಡಿಕೊಟ್ಟಿರುವ ಲೇಖಕರ ಹಲವಾರು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

**ಆ**ಧುನಿಕ ಭಾರತದ ಸಾರ್ವಜನಿಕ ಬದುಕಿನಲ್ಲಿ ದೇಶದ ಅಭಿವೃದ್ಧಿಗಾಗಿ ಹಾತೊರೆಯುವ ಪ್ರತಿಯೊಬ್ಬ ಪ್ರಜ್ಞಾವಂತನಿಗೂ ಎದುರಾಗುವ ಮೊಟ್ಟಮೊದಲ ಸಮಸ್ಯೆಯೇ ಈ ದೇಶದ ಸಾಮಾನ್ಯ ಜನತೆಯ ಬಡತನ ಮತ್ತು ದಾರಿದ್ರ್ಯ. ನಮ್ಮ ದೇಶದ ಶೇಕಡಾ ೬೦ರಷ್ಟು ಜನರು ಬಡತನದ ರೇಖೆಯಿಂದ ಕೆಳಗಿದ್ದಾರೆ; ಕನಿಷ್ಠ ಸೌಲಭ್ಯಗಳಿಗಾಗಿ ಕದನ ಮಾಡುತ್ತಿದ್ದಾರೆ. ಇಂತಹ ಒಂದು ಜ್ವಲಂತ ಸಮಸ್ಯೆ ಸ್ವಾಮಿ ವಿವೇಕಾನಂದರ ಚಿಂತನೆಗಳಲ್ಲಿ ವಿಶೇಷ ಪ್ರಾಧಾನ್ಯತೆಗೆ ಹಾಗೂ ಆಮೂಲಾಗ್ರ ಚರ್ಚೆಗೆ ವಿಷಯವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದಕ್ಕೆ ಕಾರಣ, ಸ್ವಾಮಿ ವಿವೇಕಾನಂದರಷ್ಟು ಭಾರತವನ್ನು ಪ್ರೀತಿಸಿದವರು ಬಹುಶಃ ಇತಿಹಾಸದಲ್ಲಿ ಹೆಚ್ಚು ಜನ ನಮಗೆ ಸಿಕ್ಕಲಾರರು. ಹೀಗಾಗಿ ಭಾರತವನ್ನು ಹಿಂದೆ ಕಾಡಿದ ಮತ್ತು ಪ್ರಸ್ತುತ ಕಾಡುತ್ತಿರುವ ಸಮಸ್ಯೆಗಳು ಸ್ವಾಮಿ ವಿವೇಕಾನಂದರ ಮನಸ್ಸನ್ನು ತಲ್ಲಣಗೊಳಿಸಿದ ಸಮಸ್ಯೆಗಳೇ ಆಗಿವೆ.

ಭವ್ಯವಾದ ಪರಂಪರೆಯನ್ನು ಹೊಂದಿರುವ ಈ ದೇಶದ ಅವನತಿಗೆ ನಿಜವಾದ ಕಾರಣವನ್ನು ತಿಳಿಯುವುದರಲ್ಲಿ ೧೯ನೇ ಶತಮಾನದಲ್ಲಿ ಬಂದ ಎಲ್ಲ ಸುಧಾರಕರಿಗಿಂತಲೂ ಸ್ವಾಮಿ ವಿವೇಕಾನಂದರು ವಿಭಿನ್ನವಾಗಿ ನಿಲ್ಲುತ್ತಾರೆ. ಭಾರತದ ಅವನತಿಯ ಕಾರಣವನ್ನು ಅವರು ತಮ್ಮಲ್ಲಿನ ಆಳವಾದ ನೋವನ್ನು ತೋಡಿಕೊಳ್ಳುವ ಈ ಮಾತುಗಳಲ್ಲಿ ವ್ಯಕ್ತಪಡಿಸುತ್ತಾರೆ: "ನಮ್ಮ ಜನಾಂಗದ ಒಂದು ಮಹಾಪಾಪವೇ ಇಲ್ಲಿನ ಜನಸಾಧಾರಣರನ್ನು ನಿರ್ಲಕ್ಷಿಸಿದ್ದು. ಜನಸಾಧಾರಣರು ನಮ್ಮ ವಿದ್ಯಾಭ್ಯಾಸಕ್ಕೆ ಹಣ ನೀಡುವವರು. ಅವರು ನಮ್ಮ ದೇವಸ್ಥಾನಗಳನ್ನು ಕಟ್ಟುವರು. ಆದರೆ ಅವರಿಗೆ ನಮ್ಮಿಂದ ಸಿಕ್ಕುವ ಫಲವೇ ನಮ್ಮ ಕಾಲಿನ ಒದೆತ. ಅವರು ನಿಜವಾಗಿಯೂ ಹೀನಾಯವಾದ ಬಾಳನ್ನು ಬಾಳುತ್ತಿರುವರು. ನಾವು ಭರತಖಂಡವನ್ನು ಮೇಲಕ್ಕೆ ಎತ್ತಬೇಕಾದರೆ ಈ ಬಡಜೀವಿಗಳಿಗಾಗಿ ಕೆಲಸ ಮಾಡಬೇಕು."

ಸ್ವಾಮೀಜಿಯವರು ತಮ್ಮ ಪರಿವ್ರಾಜಕ ದಿನಗಳಲ್ಲಿ ಬಡ ಜನರ ಸಂಕಟ ಮತ್ತು ಹಸಿವಿನ ಯಾತನೆಯನ್ನು ಸ್ವತಃ ಕಂಡು ಕೊಂಡಿದ್ದರು. ಅವರು ಅಮೇರಿಕಕ್ಕೆ ತೆರಳುವ ಮುನ್ನ ತಮ್ಮ ಸೋದರ ಸಂನ್ಯಾಸಿಗಳಿಗೆ ಬರೆದ ಪತ್ರವೊಂದರಲ್ಲಿ ಹೀಗೆ ಹೇಳುತ್ತಾರೆ: "ನಾನು ಸಮಸ್ತ ಭರತಖಂಡವನ್ನು ಸುತ್ತಿದ್ದೇನೆ. ಆದರೆ ಸೋದರರೆ, ನನ್ನನ್ನು ಅತ್ಯಂತ ತೀಕ್ಷ್ಣವಾಗಿ ಬಾಧಿಸಿದ ಸಂಗತಿಯೆಂದರೆ ಜನಸಾಮಾನ್ಯರನ್ನು ಪೀಡಿಸುತ್ತಿರುವ ಅತ್ಯಂತ ದಾರುಣವಾದ ಬಡತನ ಮತ್ತು ದುಃಖ. ನಾನು ಅವರ ದೀನಸ್ಥಿತಿಗೆ ಮರುಕಗೊಂಡು ಕಣ್ಣೀರಿಟ್ಟಿದ್ದೇನೆ. ಅವರ ಬಡತನ ಹಾಗೂ ದುಃಖಗಳನ್ನು ಮೊಟ್ಟಮೊದಲು ನಿರ್ಮೂಲನಗೊಳಿಸದೆ, ಧರ್ಮವನ್ನು ಬೋಧಿಸುವುದು ವ್ಯರ್ಥ."

೧೮೯೩ರ ಆಗಸ್ಟ್ ೨೩ರಂದು ಅಮೆರಿಕೆಯಲ್ಲಿ ಮಾತನಾಡುತ್ತಾ, ಭಾರತದಲ್ಲಿನ ಜನಸಾಮಾನ್ಯರ ಸಂಕಟ ಹಾಗೂ ಹಸಿವಿನ ಯಾತನೆಯ ಬಗ್ಗೆ ಸ್ವಾಮೀಜಿ ಈ ದಾರುಣವಾದ ಚಿತ್ರಣವನ್ನು ನೀಡುತ್ತಾರೆ: "ಕೆಲವು ಸಂದರ್ಭಗಳಲ್ಲಿ ಒಂದು ಪ್ರದೇಶದ ಸಮಸ್ತ ಜನರೂ ತಿಂಗಳುಗಟ್ಟಲೆ ಒಂದು ಜಾತಿಯ ಮರದಲ್ಲಿ ಬೆಳೆಯುವ ಹೂವೊಂದನ್ನು ಕುದಿಸಿ, ಅದನ್ನೇ ತಮ್ಮ ಆಹಾರವಾಗಿ ತಿನ್ನುತ್ತಾರೆ. ಮತ್ತೆ ಕೆಲವು ಪ್ರದೇಶಗಳಲ್ಲಿ ಬರೀ ಅನ್ನವಷ್ಟೇ ಅವರಿಗೆ ತಿನ್ನಲು ದೊರಕುತ್ತದೆ. ಮಕ್ಕಳು ಮತ್ತು ಸ್ತ್ರೀಯರು ಬರೀ ಗಂಜಿಯನ್ನು ಕುಡಿದೇ ದಿನಗಳನ್ನು, ತಿಂಗಳುಗಳನ್ನು ನೂಕುವುದುಂಟು. ದೇಶದ ಅರ್ಧದಷ್ಟು ಜನಕ್ಕೆ ಒಪ್ಪೊತ್ತಿನ ಊಟವಾದರೆ, ಮಿಕ್ಕವರಿಗೆ ತಮ್ಮ ಮುಂದಿನ ಊಟಕ್ಕೂ ಎದುರು ನೋಡುವಂಥ ದಾರುಣ ಪರಿಸ್ಥಿತಿ ಅಲ್ಲಿದೆ."

**ಭಾರತದಲ್ಲಿ ಬಡತನದ ಕಾರಣಗಳು:** ಇತಿಹಾಸದ ಗಂಭೀರ ವಿದ್ಯಾರ್ಥಿಯಾಗಿದ್ದ ಸ್ವಾಮಿ ವಿವೇಕಾನಂದರಿಗೆ ಭಾರತದ ಇಂತಹ ದಾರುಣ ಸ್ಥಿತಿಗೆ ಐತಿಹಾಸಿಕ ಕಾರಣಗಳು ಸ್ಪಷ್ಟವಾಗಿ ಗೋಚರವಾಗಿದ್ದವು. ಅಷ್ಟೇ ಅಲ್ಲ, ಜಗತ್ತಿನಲ್ಲಿ ಕ್ರಿಯಾಶೀಲವಾಗಿರುವ